**2 ನೇ ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪಾಂಡವಪುರ**

**ಸಿ.ಸಿ.ಸಂಃ 714/2022**

ಕರ್ನಾಟಕ ರಾಜ್ಯದ ಪರವಾಗಿ
ಪೊಲೀಸರು ನಿರೀಕ್ಷಕರು
ಪಾಂಡವಪುರ ಪೊಲೀಸ್ ಠಾಣೆ
ಪಾಂಡವಪುರ - ಪಿರ್ಯಾದಿದಾರರು

- ವಿರುದ್ಧ -

1) ಮನೋಜ್ ಬಿನ್ ಲಿಂಗಪ್ಪ, 30 ವರ್ಷ,
2) ಕೀರ್ತಿ ಬಿನ್ ಪ್ರಭುಸ್ವಾಮಿ, 24 ವರ್ಷ,
3) ರಾಜೇಶ ಬಿನ್ ನಂದೀಶ, 24 ವರ್ಷ,

ಆ 1 ರಿಂದ ಆ 3 ರವರ ವಾಸಃ ಚಿಕ್ಕಾಯರಹಳ್ಳಿ ಗ್ರಾಮ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ.

4) ನೃಪತುಂಗ ಬಿನ್ ಶಂಕರ, 30 ವರ್ಷ, ವಾಸಃ ಅರಳಕುಪ್ಪೆ ಗ್ರಾಮ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ. - ಆರೋಪಿಗಳು

ಶ್ರೀಮತಿ ಪದ್ಮ ಎಂ, ಬಿ.ಎ.ಎಲ್., ಎಲ್.ಎಲ್.ಬಿ. 2 ನೇ ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪಾಂಡವಪುರ ಆದ ನಾನು,

ಆರೋಪಿಗಳಾದ ನಿಮ್ಮನ್ನು ಈ ಕೆಳಕಂಡ ದೋಷಾರೋಪಣೆಗೆ ಒಳಪಡಿಸುವುದೇನೆಂದರೆ,

ದೋಷಾರೋಪಣೆ

ದಿನಾಂಕಃ 14.03.2022 ರಂದು ಬೆಳಿಗ್ಗೆ 9-30 ಘಂಟೆ ಸಮಯದಲ್ಲಿ ಪಾಂಡವಪುರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಪಾಂಡವಪುರ ಟೌನ್ ಬಿ ಎಸ್ ಎನ್ ಎಲ್ ಕಛೇರಿಯ ಹಿಂಭಾಗ ವಿ ಸಿ ನಾಲೆಯ ರಸ್ತೆಯಲ್ಲಿ ನಾಲೆಯ ಅಡ್ಡವಿರುವ ಸೇತುವೆ ಸಮೀಪ ಆರೋಪಿಗಳಾದ ನೀವು ನಿಮ್ಮ ಏಕೋದ್ದೇಶದಿಂದ ಕೃತ್ಯವೆಸಗಿ, ಚಾಸಾ 1 ರವರು ತಮ್ಮ ಮೊಬೈಲ್ ಫೋನಿನ ಫೇಸ್ ಬುಕ್ ನಲ್ಲಿ ಆರೋಪಿ 1 ರವರ ಹೆಸರಿನ ಅಕೌಂಟ್ ಕ್ರಿಯೇಟ್ ಮಾಡಿರುತ್ತಾರೆಂದು ತೀಟೆ ಜಗಳ ತೆಗೆದು ಸಾಕ್ಷಿ 1 ರವರ

ಮೋಟಾರ್ ಸೈಕಲನ್ನು ಅಡ್ಡಗಟ್ಟಿ ಮುಂದಕ್ಕೆ ಹೋಗದಂತೆ ತಡೆಹಿಡಿದಿರುತ್ತೀರಿ ಎಂದು ಮೂಲಕ ಭಾ.ದಂ.ಸಂ. ಕಲಂ 341 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಬರುವಂತೆ ಎಸಗಿರುತ್ತೀರಿ.

2. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಅದೇ ಹಿನ್ನೆಲೆಯಲ್ಲಿ ಆರೋಪಿಗಳಾದ ನೀವು ನಿಮ್ಮ ಏಕೋದ್ದೇಶದಿಂದ ಮೇಲಿನಂತೆ ಕೃತ್ಯವೆಸಗಿ, ಚಾಸಾ **1** ರವರಿಗೆ ಬೋಳಿಮಗನೆ ಸೂಳೆಮಗನೆ ಎಂದು ಅವಾಚ್ಯವಾಗಿ ಬೈದಿರುತ್ತೀರಿ ಎಂದು ಮೂಲಕ ಭಾ.ದಂ.ಸಂ. ಕಲಂ 504 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಬರುವಂತೆ ಎಸಗಿರುತ್ತೀರಿ.

3. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಅದೇ ಹಿನ್ನೆಲೆಯಲ್ಲಿ ಆರೋಪಿಗಳಾದ ನೀವು ನಿಮ್ಮ ಏಕೋದ್ದೇಶದಿಂದ ಮೇಲಿನಂತೆ ಕೃತ್ಯವೆಸಗಿ, ಆ-1 ರವರು ಸಾಕ್ಷಿ 1 ರವರ ಕತ್ತಿನಪಟ್ಟಿ ಹಿಡಿದು ಎಳೆದಾಡಿ ಷರ್ಟ್ ಹರಿದುಹಾಕಿ ದೊಣ್ಣೆಯಿಂದ ಸಾಕ್ಷಿ 1 ರವರ ಮೈಮೇಲೆ ಹಾಗೂ ಎಡಗೈ ಮೇಲೆ ಹೊಡೆದು ಹಾಗೂ ಆ-2 ರವರು ಸಾಕ್ಷಿ 1 ರವರ ಮುಖ ಮತ್ತು ತಲೆ ಮೇಲೆ ಕಲ್ಲಿನಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯವುಂಟು ಮಾಡಿರುತ್ತೀರಿ ಆ ಮೂಲಕ ಭಾ.ದಂ.ಸಂ. ಕಲಂ 324 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಬರುವಂತೆ ಎಸಗಿರುತ್ತೀರಿ.

4. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಅದೇ ಹಿನ್ನೆಲೆಯಲ್ಲಿ ಆರೋಪಿಗಳಾದ ನೀವು ನಿಮ್ಮ ಏಕೋದ್ದೇಶದಿಂದ ಮೇಲಿನಂತೆ ಕೃತ್ಯವೆಸಗಿ, ಆ-3 ರವರು ಕೈಯಿಂದ ಸಾಕ್ಷಿ 1 ರವರ ಮೈಮೇಲೆ ಹೊಡೆದು ಹಾಗೂ ಆ-4 ರವರು ಹಲ್ಲೆಮಾಡಿ ಕೆಳಗಿ ಕೆಡವಿಕೊಂಡು ಕಾಲಿನಲ್ಲಿ ಮೈಮೇಲೆ ತುಳಿದು ಸಾಮಾನ್ಯ ಸ್ವರೂಪದ ಗಾಯವುಂಟು ಮಾಡಿರುತ್ತೀರಿ ಆ ಮೂಲಕ ಭಾ.ದಂ.ಸಂ. ಕಲಂ 323 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಬರುವಂತೆ ಎಸಗಿರುತ್ತೀರಿ.

5. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಅದೇ ಹಿನ್ನೆಲೆಯಲ್ಲಿ ಆರೋಪಿಗಳಾದ ನೀವು ನಿಮ್ಮ ಏಕೋದ್ದೇಶದಿಂದ ಮೇಲಿನಂತೆ ಕೃತ್ಯವೆಸಗಿ, ಆ-1 ರವರು ಚಪ್ಪಲಿಯಿಂದ ಸಾಕ್ಷಿ 1 ರವರ ಮುಖದ ಹೊಡೆದು ಅವಮಾನ ಮಾಡಿರುತ್ತೀರಿ ಆ ಮೂಲಕ ಭಾ.ದಂ.ಸಂ. ಕಲಂ 355 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಬರುವಂತೆ ಎಸಗಿರುತ್ತೀರಿ.

6. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಅದೇ ಹಿನ್ನೆಲೆಯಲ್ಲಿ ಆರೋಪಿಗಳಾದ ನೀವು ನಿಮ್ಮ ಏಕೋದ್ದೇಶದಿಂದ ಮೇಲಿನಂತೆ ಕೃತ್ಯವೆಸಗಿ, ಸಾಕ್ಷಿ 1 ರವರಿಗೆ ಈ ದಿನ ಸಿಕ್ಕಿದ್ದಾನೆ ಈ ನನ್ನ ಮಗನನ್ನು ಉಳಿಸಬಾರದು ಎಂದು ಹಾಗೂ ಈ ದಿನ ನೀನು ಬದುಕಿಕೊಂಡೆ ಮುಂದೊಂದು ದಿನ ನಿನ್ನನ್ನು ಕೊಲೆ ಮಾಡದೆ ಬಿಡುವುದಿಲ್ಲವೆಂದು ಕೊಲೆ ಬೆದರಿಕೆ ಹಾಕಿರುತ್ತೀರಿ. ಆ ಮೂಲಕ ಭಾ.ದಂ.ಸಂ. ಕಲಂ 506 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಬರುವಂತೆ ಎಸಗಿರುತ್ತೀರಿ.

**ಸದರೀ ಮೇಲ್ಕಂಡ ಆರೋಪಗಳಿಗೆ ಆರೋಪಿಯಾದ ನೀವು ಗುರಿಯಾಗತಕ್ಕದ್ದು ಎಂದು ನಾನು ಈ ಮೂಲಕ ನಿರ್ದೇಶಿಸಿರುತ್ತೇನೆ.**

ಪ್ರ ಃ ಕನ್ನಡದಲ್ಲಿ ಓದಿ ಹೇಳಲಾದ ದೋಷಾರೋಪಣೆಗಳು ಅರ್ಥವಾಯಿತಾ?

**ಉಃ ಆ-1 ಃ**

ಆ-2 ಃ

ಆ-3 ಃ

ಆ-4 ಃ

ಪ್ರ ಃ ಆಪಾದನೆಯನ್ನು ಒಪ್ಪಿಕೊಳ್ಳುವಿರಾ, ಅಥವಾ ವಿಚಾರಣೆಯಾಗಬೇಕಾ?

**ಉಃ ಆ-1 ಃ**

ಆ-2 ಃ

ಆ-3 ಃ

ಆ-4 ಃ

**ಮೇಲ್ಕಂಡ ದೋಷಾರೋಪಣೆಯನ್ನು ಕನ್ನಡದಲ್ಲಿ ಓದಿ ಹೇಳಲಾಗಿದ್ದು, ಆರೋಪಿಗಳು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ದೃಢೀಕರಿಸಲಾಗಿದೆ.**

**2** ನೇ ಅಪರ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ
ಪಾಂಡವಪುರ

ದಿನಾಂಕಃ 19.09.2023
ಸ್ಥಳಃ ಪಾಂಡವಪುರ

ಆರೋಪಿಗಳ ಸಹಿಃ